ಶ್ರೀ ಆರ್.ಎಲ್. ಜಾಲಪ್ಪ : ನಾವು ಹಾಕಿದ್ದೇವೆ, ನೀವೂ ಏಕೆ ಹಾಕುತ್ತಿದ್ದೀರಿ.....

(ಗೊಂದಲ)

ಅಧ್ಯಕ್ಷರು : ಈಗ ನೀವು ಹೇಳುತ್ತೀರಿ, ನಾವು ಹಾಕಿದ್ದೆವು ಎಂದು ಹೇಳುತ್ತಿದ್ದೀರಿ. ಇವರು ಇಲ್ಲಿ ಇನ್ನೂ ಹಾಕಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ದರ ಏರಿಸುವಲ್ಲಿ ಯಾವುದೇ ಅನುಮಾನ ಇಲ್ಲ. ಇಲ್ಲಿ ಏನು ಕಳುಹಿಸಿದ್ದಾರೆ, ಅದಕ್ಕೆ ತೀವ್ರವಾದ ಪ್ರತಿಭಟನೆ ಮಾಡಿ, ಸಭಾತ್ಯಾಗ ಮಾಡುತ್ತೇವೆ. ಇಲ್ಲದಿದ್ದರೆ ಸಾರಿಗೆ ಸಂಸ್ಥೆಯವರು ದರ ಏರಿಸುವುದಿಲ್ಲವೆಂದು ಭರವಸೆ ಕೊಡಬೇಕು, ಇದನ್ನು ಮುಂದಕ್ಕೆ ಹಾಕಲಾಗಿದೆ ಎಂದು ಹೇಳಬೇಕು. ತೆರೆಮರೆಯಲ್ಲಿ; ಹಿಂದಿನ ಬಾಗಿಲಿನಲ್ಲಿ ಕಳುಹಿಸುವುದು ಸರಿಯಲ್ಲ.

ಅಧ್ಯಕ್ಷರು : ಈ ಕಾಗದ 25–3–92ರಂದು ಹೊರಟಿರತಕ್ಕಂತಾದ್ದು, ಇವತ್ತು ಏಪ್ರಿಲ್ ಒಂದನೇ ತಾರೀಖು ಆದ್ದರಿಂದ ಒಂದಕ್ಕೂಂದಕ್ಕೆ ಸಂಬಂಧವೇ ಇಲ್ಲ, ಇದು 25ನೇ ತಾರೀಖಿನ ವ್ಯವಹಾರ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಾವು ಇದನ್ನು ಸಂಪೂರ್ಣವಾಗಿ ವಿರೋಧ ಮಾಡುತ್ತೇವೆ, ಅವರು ಖಂಡಿತವಾಗಿಯೂ ಜಾಸ್ತಿ ಮಾಡುತ್ತಾರೆ, ಜಾಸ್ತಿ ಮಾಡುವುದರಲ್ಲಿ ಅನುಮಾನವೇ ಇಲ್ಲ. ಇದು ಬಡವರಿಗೆ, ಜನಸಾಮಾನ್ಯರಿಗೆ ಈ ಸರ್ಕಾರ ಮಾಡತಕ್ಕ ಭಾರಿ ಮೋಸ, ಅನ್ಯಾಯ ಎಂದು ಹೇಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು.

(ಗೊಂದಲ)

ಶ್ರೀ ಎಂ. ನಾರಾಯಣಸ್ವಾಮಿ : ಅವರೇನಾದರೂ ಜಾಸ್ತಿ ಮಾಡಿದರೆ, ಅವರು ಈ ಕಡೆ ಬರುತ್ತಾರೆ, ನಾವು ಆ ಕಡೆ ಹೋಗುತ್ತೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಇದು, ಈ ರಾಜ್ಯದ ಜನಸಾಮಾನ್ಯರ ಕತ್ತನ್ನು ಹಿಸುಕತಕ್ಕ ಪ್ರಯತ್ನ. ಈ ಸರ್ಕಾರದ ಧೋರಣೆಯನ್ನು ಪ್ರತಿಭಟನೆ ಮಾಡುತ್ತೇವೆ, ರಾಜ್ಯದ ಜನರೂ ಪ್ರತಿಭಟನೆ ಮಾಡುತ್ತಾರೆ. ಈ ರೀತಿಯ ಪ್ರಯತ್ನವನ್ನು ಸರ್ಕಾರ ಮಾಡಿದರೆ, ಸರ್ಕಾರ ಚೆಂದಿಚೆಂದಿಯಾಗುತ್ತದೆ. ವಿಧಾನಸಭೆ ನಡೆಯುತ್ತಿರತಕ್ಕ ಸಂದರ್ಭದಲ್ಲಿ, ಶಾಸಕರ ಗಮನಕ್ಕೂ ಬರದೇ, ಈ ರೀತಿ ಬೆಲೆ ಏರಿಕೆ ಮಾಡುವುದು, ಬಸ್ ದರ ಏರಿಕೆ ಮಾಡತಕ್ಕಂಥ ಪ್ರಯತ್ನ ಖಂಡಿತವಾಗಿಯೂ ಜನತೆಗೆ ಮಾಡತಕ್ಕ ದ್ರೋಹ, ಇದನ್ನು ತಿದ್ದಿಕೊಳ್ಳದಿದ್ದರೆ, ಸರ್ಕಾರ ಇಡೀ ರಾಜ್ಯದಲ್ಲಿ ಚೆಂದಿ ಚೆಂದಿಯಾಗಿ ಹೋಗುತ್ತದೆ. ನಾವು ಈ ರೀತಿಯ ಎಚ್ಚರಿಕೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. (ಆ ಸುತ್ತೋಲೆಯನ್ನು ಹರಿದು ಹಾಕಿದರು).

ಅಧ್ಯಕ್ಷರು : ನನ್ನದೊಂದು ಮನವಿ. ನೀವು ಹರಿದುಹಾಕಿ ಆದರೆ ಆದನ್ನೂ ನಿಮ್ಮ ಜೊತೆಯಲ್ಲಿಯೇ ತಗೆದುಕೊಂಡು ಹೋಗಿ. ಪುನಃ ಅಲ್ಲಿಯೇ ಎಸೆಯಬೇಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ನಮ್ಮ ಜೊತೆಯಲ್ಲಿ ತೆಗೆದುಕೊಂಡು ಹೋದರೆ ಚೆಂದಿಯಾದ ಸರ್ಕಾರವನ್ನು ಜೊತೆಯಲ್ಲಿ ತೆಗೆದುಕೊಂಡು ಹೋದ ಹಾಗೆ ಆಗುತ್ತದೆ. ಈ ಸರ್ಕಾರವನ್ನು ಧೂಳೀಪಟ ಮಾಡಬೇಕೆಂದು ಬಿಟ್ಟು ಹೋಗುತ್ತಿದ್ದೇವೆ.

(ಬಿ.ಜೆ.ಪಿ. ಸದಸ್ಯರೂ ಸಭಾತ್ಯಾಗ ಮಾಡಿದರು).

ಶ್ರೀ ಬಸವರಾಜ ರಾಯರೆಡ್ಡಿ : ಇಲ್ಲಿ ಕಸದ ಬುಟ್ಟಿ ಇದ್ದರೆ ಬಹಳ ಒಳ್ಳೆಯದಾಗುತ್ತಿತ್ತು.

ಶ್ರೀ ಬಿ.ಹೆಚ್. ಬನ್ನಿಕೋಡ್ : ಇಲ್ಲಿ ಕಸದ ಬುಟ್ಟಿ ಇದ್ದಿದ್ದರೆ, ಸರ್ಕಾರದ ಎಲ್ಲಾ ಅನೈತಿಕ ಕೆಲಸಗಳನ್ನು ಬುಟ್ಟಿಗೆ ಹಾಕಬಹುದಿತ್ತು.

ಅಧ್ಯಕ್ಷರು : ನಿಮ್ಮ ಕೆಲವರ ನಡವಳಿಕೆಯಿಂದ, ಈ ಸದನವನ್ನು ಕಸದ ಬುಟ್ಟಿ ಮಾಡುತ್ತಿದ್ದೀರಿ ಅಷ್ಟೆ.

ಶ್ರೀ ಕೆ.ಜೆ. ಜಾರ್ಜ್ (ನಗರಾಭಿವೃದ್ಧಿ ಮಂತ್ರಿಗಳು) : ತಾವು ಸೂಚನೆ ಕೊಟ್ಟಿದ್ದೀರಿ. ಸದನ ನಡೆಯುತ್ತಿರುವ ಸಂದರ್ಭದಲ್ಲಿ ಈ ತರಹ ಸುತ್ತೋಲೆ ಕಳುಹಿಸಬಾರದು, ಎಂದು ಹೇಳಿದ್ದೀರಿ, ಆ